ಒತ್ತೊತ್ತಾದವು. ಮತ್ತೆ ಆರೇ ತಿಂಗಳಲ್ಲಿ ವಾತಾವರಣ ಪೂರ್ಣ ಬದಲಾಯಿತು.

ಇತ್ತೀಚೆಗೆ ರವಿ ನಾನಿಲ್ಲದಾಗ ಆಗಾಗ್ಗೆ ಬಂದು ಅಪ್ಪ– ಅಮ್ಮನೊಡನೆ ಮಾತಾಡಿ ಹೋದದ್ದು ತಿಳಿಯಿತು. 'ಓದಾಯ್ತು ಕೆಲಸ ಆಯ್ತು ಇನ್ನು ಮದುವೆ ಮುಗಿಸೋವರೆಗೂ ನಮ್ಮ ಎದೆ ಭಾರ ಇಳಿಯೋಲ್ಲ...' ಅಮ್ಮನ ರಾಗ ಗಟ್ಟಿಯಾಯಿತು. ಈ ಬಿಡದ ಸಂಬಂಧದ ಕುಣಿಕೆ ನನ್ನ ಕುತ್ತಿಗೆ ಬಿಗಿಯುವ ಮೊದಲು ಪಾರಾಗಲು ತಹತಹಿಸಿದೆ.

ಹೇಗೆಂದು ಹೊತ್ತಾಗದೆ ಒದ್ದಾಡುವಾಗ, ಅಂಥ ಅವಕಾಶವೊಂದು ಬಾಗಿಲು ಬಡಿಯಿತು!

ಬೆಳಗ್ಗೆ, ಇನ್ನೂ ಆಫೀಸಿಗೆ ಕಾಲು ಇಡುತ್ತಿದ್ದಂತೆ. ಲೀಲಾ ಓಡಿ ಬಂದು ಕೈ ಒತ್ತಿ ''ಕಂಗ್ರಾಟ್ಸ್'' ಎಂದು ಅತ್ಯುತ್ಸಾಹದಿಂದ ಕೂಗಿದಳು.

"ಏನಕ್ಕೆ?" ಅರ್ಥವಾಗದೆ ಕೇಳಿದೆ.

"ಜರ್ಮನಿಗೆ ಕಳಸೋರಲ್ಲಿ ನಿನ್ನ ಹೆಸರೂ ಇದೆ. ಉನ್ನತ ವ್ಯಾಸಂಗಕ್ಕಂತೆ..." ಅಂದಳು.

"ಹಾಂ..." ಎಂದು ಕಣ್ಣರಳಿಸಿದೆ. ಎಷ್ಟು ಅನಿರೀಕ್ಷಿತವಿತ್ತು!

"ಒಂದೂವರೆ ವರ್ಷ, ಮಜ ಮಾಡು. ಇಡೀ ಯೂರೋಪ್ ಸುತ್ತಿ ಬರಬಹುದು..." ನಾನು ಏನೂ ಹೇಳಲಿಲ್ಲ.

"ಏನು ಮದುವೆ ಮಾಡಿಕೊಂಡೇ ಹೋಗೋದಾ?" ಅವಳೇ ಕೇಳಿದಳು. ನಾನು ಸುಮ್ಮನೆ ಅವಳ ಮುಖವನ್ನೇ ನೋಡಿದೆ. ನನಗೆ ಗೊತ್ತಿತ್ತು ಅಮ್ಮ ಮದುವೆ ಇಲ್ಲದೆ ನನ್ನ ಜರ್ಮನಿಗೆ ಖಂಡಿತಾ ಕಳಿಸೋಲ್ಲ. ಇಲ್ಲಿಯವರೆಗೂ ಹೇಗೋ ಮುಂದೂಡುತ್ತಾ ಬಂದ ನಿರ್ಧಾರವನ್ನು ಈಗ ಕೈಗೊಳ್ಳುವ ಸಮಯ ಬಂದೇಬಿಟ್ಟಿತು. ಬಹಳ ಹೊತ್ತು ಏನು ಉತ್ತರಿಸಲೂ ತಿಳಿಯಲಿಲ್ಲ. ನಂತರ ಮೆಲ್ಲನೆ ಹೇಳಹೊರಟೆ. ಸಂಬಂಧವೇ ಇಲ್ಲದಂತೆ–

"ಲೀಲಾ, ನನ್ನ ಗಂಡ ಮಹತ್ವಾಕಾಂಕ್ಷೆಯ ಮನುಷ್ಯನಾಗಿರಬೇಕು. ಇದೆಲ್ಲ ಪೌರುಷ. ಏನಾದರೂ ಆಗಬೇಕೆಂಬ ಛಲ... ನಾನು ಬರೀ ಗಂಡಸರಲ್ಲಿ ಮಾತ್ರ ಬಯಸುತ್ತಾ ಇಲ್ಲ. ಏನೊಂದೂ ಆಗದೆ ಗಂಡಂದಿರ 'ಹೆಂಡತಿ' ಮಾತ್ರ ಆಗಿ ತಮ್ಮ ಸತೀತ್ವವನ್ನೆ ಪ್ರಶಸ್ತಿಯಂತೆ ಧರಿಸಿ ಬೀಗುವ ಹೆಂಗಸರನ್ನು ಕಂಡರೂ ನನಗೆ ಆಗದು..." ಇನ್ನೂ ಏನೇನೋ ಹೇಳಿದೆ. ಲೀಲಾ ಪೂರಾ ಗೊಂದಲಗೊಂಡು...

"ಏನೇ ಹಾಗಂದರೆ...? ನಿನ್ನ– ರವಿ ಮದುವೆ?" ಅವಳ ಪ್ರಶ್ನೆಗೆ ನಾ ಉತ್ತರಿಸದೆ ನನ್ನ ಮೇಜಿಗೆ ಹೋಗಿ ಕುಳಿತೆ. ಎದುರಾಗಿದ್ದ ರಾಶಿ ಫೈಲ್‌ಗಳ ಪಕ್ಕಕ್ಕೆ ಸರಿಸಿ ಕಣ್ಣು ಮುಚ್ಚಿ ಚಿಂತಿಸಿಯೇ ಚಿಂತಿಸಿದೆ – 'ಅಬ್ಬ, ಈ ಹದಿನಾರಕ್ಕೆ ಮೊಳೆತು ಬಿಡುತ್ತಲ್ಲ ಪ್ರೀತಿ. ಅದು ಇಪ್ಪತ್ತು ದಾಟಿದ ಮೇಲೂ ಉಳಿಯೋದು ಏಕಿಷ್ಟು ಅಪರೂಪ? ನನ್ನ ಪ್ರೀತಿ ಸತ್ತ ಕೆಟ್ಟ ವಾರ್ತೆನ ಅವನಿಗೆ ಹೇಗೆ ಹೇಳಲಿ? ಹೇಗೋ ಆ ವಯಸ್ಸಿನಲ್ಲಿ ಹೇಳಿದ್ದು, ಪ್ರಮಾಣಿಸಿದ್ದು, ಕೈ ಹಿಡಿದು ನಡೆದದ್ದು, ಎಲ್ಲವನ್ನೂ ಎದುರಿಗಿಟ್ಟು ಕಟ್ಟೆ ಹಾಕುತ್ತಾನೆ ಅನಿಸುತ್ತೆ. ಎಷ್ಟು ಬಾರಿ ಹೇಳಿಬಿಡಲೇ ಅನಿಸಿದೆ, ಆದರೆ ಅವನ ಕಣ್ಣ ಕನಸುಗಳು ಕುಸಿಯದಂತೆ ಹೇಗೆ ಹೇಳುವುದು? ನೀ ಬದಲಾದೆ ಅಂತಾನೆ, 'ಮೋಸ ಮಾಡಿದೆ, ಕೈಕೊಟ್ಟೆ, ಪ್ರೀತಿಗೆ ಅಂತಸ್ತು ಸ್ಥಾನಮಾನ ಅಡ್ಡ ಬರುತ್ತಾ... ಅಂತ ಭಾಷಣ ಬಿಗಿಯುತ್ತಾನೆ.'

ನನ್ನಲ್ಲೇ ಬಹಳ ಯೋಚಿಸಿದೆ. ಬದುಕಿನ ನಿರ್ಧಾರಗಳ, ನಿರ್ಣಯಗಳ ನಿರಂತರವಾಗಿ ಮುಂದೂಡಲಾಗದು. ಸಂಜೆ ರವಿಗೆ ಬರಲು ಹೇಳಿಬಿಡಬೇಕು. ಕಡೆಗೂ ನಿಶ್ಚಯಿಸಿ ನಿರಾಳವಾಗಿ ಕೆಲಸದಲ್ಲಿ ತೊಡಗಿದೆ.